ಆ) ಕೂಡ್ಲಿಗಿಯಲ್ಲಿ 40 ಲಕ್ಷ ರೂ.ಗಳ ಅಂದಾಜು ವೆಚ್ಚದಲ್ಲಿ ರಸ್ತೆ ಬದಿ ಸೌಲಭ್ಯವನ್ನು ನಿರ್ಮಿಸಲಾಗಿದೆ.

ಇ) 40.00 ಲಕ್ಷ ರೂ.ಗಳು.

ಕೆ.ಆರ್.ಡಿ.ಸಿ.ಎಲ್. ಮುಖಾಂತರ ಅನುದಾನ ಬಿಡುಗಡೆ

291 (1503) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಸಗಡ): ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ರಾಜ್ಯ ಹೆದ್ದಾರಿಗಳ ಭಾಗವಾದ ಮುನವಳ್ಳಿಯಿಂದ ಸವದತ್ತಿ ಮಾರ್ಗವಾಗಿ ಧಾರವಾಡದವರೆಗೆ 58 ಕಿಮೀ. ರಸ್ತೆಯನ್ನು ಕೆ.ಶಿಫ್ 2ನೇ ಹಂತದ ಕಾರ್ಯಕ್ರಮದಲ್ಲಿ ಸೇರಿಸಿ ಪುನರ್ ನಿರ್ಮಾಣ ಪ್ರಸ್ತಾವನೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ರಸ್ತೆಯ ಮೇಲೆ ಭಾರಿ ವಾಹನಗಳ ಸಂಚಾರ ಅಧಿಕವಿದ್ದು ಮತ್ತು ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನಕ್ಕೆ ಹೊರ ರಾಜ್ಯಗಳಿಂದ ಅಸಂಖ್ಯಾತ ಭಕ್ತಾದಿಗಳು ಬರುವುದರಿಂದ ಕೆ.ಆರ್.ಡಿ.ಸಿ.ಎಲ್. ಮೂಲಕ ಅನುದಾನ ಒದಗಿಸಿ ರಸ್ತೆ ಪುನರ್ ನಿರ್ಮಾಣ ಕೈಗೊಳ್ಳಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು) :

ಅ) ಬಂದಿದೆ.

ಆ) ಮನವಳ್ಳಿ-ಸವದತ್ತಿ ಮಾರ್ಗವಾಗಿ ಧಾರವಾಡಕ್ಕೆ ಹೋಗುವ ರಸ್ತೆಯು ಕೆಳಕಂಡ ರಾಜ್ಯ ಹೆದ್ದಾರಿಯ ಭಾಗಗಳಿಂದ ಕೂಡಿರುತ್ತದೆ.

1) ಮುನವಳ್ಳಿಯಿಂದ-ಮುನವಳ್ಳಿ ಕ್ರಾಸ್ ವರೆಗಿನ 2.00 ಕಿ.ಮೀ. ರಸ್ತೆಯು ಅರಭಾವಿ-ಚಳ್ಳಕೆರೆ ರಾಜ್ಯ ಹೆದ್ದಾರಿಯ ಸಂಖ್ಯೆ-45ರ ಭಾಗವಾಗಿದೆ.

2) ಮನವಳ್ಳಿ ಕ್ರಾಸ್‌ನಿಂದ ಸವದತ್ತಿ ವರೆಗಿನ 16 ಕಿ.ಮೀ. ರಸ್ತೆಯು ಗೋಕಾಕ್-ಸವದತ್ತಿ ರಾಜ್ಯ ಹೆದ್ದಾರಿ 103ರ ಭಾಗವಾಗಿರುತ್ತದೆ.

3) ಸವದತ್ತಿಯಿಂದ-ಧಾರವಾಡದವರೆಗಿನ 40 ಕಿ.ಮೀ. ಉದ್ದದ ರಸ್ತೆಯು ಔರಾದ ಸದಾಶಿವಗಡ ರಾಜ್ಯ ಹೆದ್ದಾರಿ 34ರ ಭಾಗವಾಗಿರುತ್ತದೆ. ಔರಾದ-ಸದಾಶಿವಗಡ ರಾಜ್ಯ ಹೆದ್ದಾರಿಯ 40 ಕಿ.ಮೀ. ಉದ್ದವನ್ನು ಮತ್ತು ಗೋಕಾಕ್-ಸವದತ್ತಿ ರಾಜ್ಯ ಹೆದ್ದಾರಿಯು 11.00 ಕಿ.ಮೀ. ಭಾಗವನ್ನು ಕ.ರ.ಅ.ನಿ.ನಿ ದ 2005-08ರ ಮೂರು ವರ್ಷ ರಾಜ್ಯ ಹೆದ್ದಾರಿಯ ನಿರ್ವಹಣೆಯ ಯೋಜನೆಯ ಬೆಳಗಾಂ ವಿಭಾಗದ ಪ್ಯಾಕೇಜ್-2ರ ಸವದತ್ತಿ ತಾಲ್ಲೂಕು ಪ್ಯಾಕೇಜ್-ಎ ನ ಅಡಿಯಲ್ಲಿ ತೆಗೆದುಕೊಳ್ಳಲಾಗಿದ್ದು ಕಾಮಗಾರಿಯನ್ನು ಡಿಸೆಂಬರ್ 2005ರಲ್ಲಿ ಪ್ರಾರಂಭಿಸಲಾಗಿದೆ ಮತ್ತು ಕಾಮಗಾರಿಗಳು ಪ್ರಗತಿಯಲ್ಲಿವೆ.